# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 603(700) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ವಿವಿಧ ಸರ್ಕಾರಿ ಪದವಿ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರು ಎಷ್ಟು; (ವಿಷಯವಾರು ಮಾಹಿತಿ ನೀಡುವುದು) | 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ವಿವಿಧ ಸರ್ಕಾರಿ ಪದವಿ ಮಹಾವಿದ್ಯಾಲಯಗಳಲ್ಲಿ ಒಟ್ಟು 9271 ಅತಿಥಿ ಉಪನ್ಯಾಸಕರು (ದಿನಾಂಕ:03.03.2026 ರಲ್ಲಿದ್ದಂತೆ) ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಸದರಿ ಅತಿಥಿ ಉಪನ್ಯಾಸಕರುಗಳ ವಿಷಯವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| (ಆ) | 2025-26ನೇ ಸಾಲಿನವರೆಗೆ ಕಾರ್ಯನಿರ್ವಹಿಸುತ್ತಿದ್ದ Non UGC ಅತಿಥಿ ಉಪನ್ಯಾಸಕರನ್ನು ಡಿಸೆಂಬರ್ 17, 2025ರವರೆಗೆ 1, 3, 5ನೇ ಸೆಮಿಸ್ಟರ್ ಕಾರ್ಯಭಾರ ಇದ್ದರೂ ಕೂಡ ಏಕಾಏಕಿಯಾಗಿ ದಿನಾಂಕ: 08.12.2025ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿ ಕೈಬಿಡಲು ಕಾರಣವೇನು; ಹಾಗೂ ಈ ಪೈಕಿ ಕಾರ್ಯನಿರ್ವಹಿಸುತ್ತಿದ್ದ ಎಷ್ಟು ಅತಿಥಿ ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:23600/2023ಕ್ಕೆ ದಿನಾಂಕ:05.09.2024ರಂದು ನೀಡಿದ ತೀರ್ಪಿನಲ್ಲಿ ಯು.ಜಿ.ಸಿ. ನಿಗದಿಪಡಿಸಿರುವ ವಿದ್ಯಾರ್ಹತೆ (NET/SLET/Ph.D) ಹೊಂದಿರುವ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರ ಆಯ್ಕೆಗೆ ಪರಿಗಣಿಸುವಂತೆ ನಿರ್ದೇಶನ ನೀಡಿತ್ತು.<br><br>ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:23600/2023ಕ್ಕೆ ದಿನಾಂಕ:05.09.2024 ರಂದು ನೀಡಿರುವ ತೀರ್ಪಿನ ಸಂಬಂದ ರಾಜ್ಯ ಸರ್ಕಾರವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅಪೀಲು ಸಂಖ್ಯೆ:1578/2024ನ್ನು ಮಾನ್ಯ ವಿಭಾಗೀಯ ಪೀಠವು ದಿನಾಂಕ:08.10.2025ರಂದು ವಿಚಾರಣೆಗೆ ತೆಗೆದುಕೊಂಡಿದ್ದು, ರಾಜ್ಯದ ರಿಟ್ ಅಪೀಲನ್ನು ವಜಾಗೊಳಿಸಿ ರಿಟ್ ಅರ್ಜಿ ಸಂಖ್ಯೆ:23600/2023ರಲ್ಲಿ ದಿನಾಂಕ:05.09.2024ರಂದು ನೀಡಿರುವ ತೀರ್ಪನ್ನು ಎತ್ತಿ ಹಿಡಿದು, ದಿನಾಂಕ:08.10.2025ರಂದು ನೀಡಿರುವ ನಿರ್ದೇಶನದ ಹಿನ್ನಲೆಯಲ್ಲಿ 2025-26ನೇ ಸಾಲಿಗೆ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ಯು.ಜಿ.ಸಿ. ನಿಗದಿಪಡಿಸಿರುವ ವಿದ್ಯಾರ್ಹತೆ (NET/SLET/Ph.D) ಹೊಂದಿರುವ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರನ್ನಾಗಿ ಆಯ್ಕೆ ಮಾಡಿಕೊಳ್ಳುವ ಸಂಬಂಧ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು.<br><br>ಸದರಿ ಆಯ್ಕೆ ಪ್ರಕ್ರಿಯೆಯಲ್ಲಿ ಕಾಲೇಜು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕಾಗಿದ್ದ ಹಿನ್ನಲೆಯಲ್ಲಿ 2024-25ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿ, 2025-26ನೇ ಸಾಲಿನ ಆಯಾ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಯನ್ವಯ 1, 3, 5ನೇ ಸೆಮಿಸ್ಟರ್ ನಲ್ಲಿನ ಕಾರ್ಯಭಾರದ ಲಭ್ಯತೆಗನುಗುಣವಾಗಿ ಮುಂದುವರೆಸಲಾಗಿದ್ದ ಎಲ್ಲಾ ಅತಿಥಿ ಉಪನ್ಯಾಸಕರನ್ನು ದಿನಾಂಕ:08.12.2025ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿತ್ತು. ಕರ್ತವ್ಯದಿಂದ ಬಿಡುಗಡೆ ಮಾಡಲಾದ ಅತಿಥಿ ಉಪನ್ಯಾಸಕರುಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |

| | | |
|---|---|---|
| (ಇ) | UGC ನಿಯಮಾವಳಿಯು 2018ರಲ್ಲಿ ಜಾರಿಯಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವೂ ಪೂರ್ವಾನ್ವಯವಾಗುವಂತೆ ಜಾರಿಮಾಡಿ ಎಂದು ಎಲ್ಲಿಯೂ ಆದೇಶಿಸದಿದ್ದರೂ ಸಹ ಸರ್ಕಾರ ಪೂರ್ವಾನ್ವಯವಾಗುವಂತೆ ಪರಿಗಣಿಸಿ ಕಳೆದ 10, 15, 20 ಹಾಗೂ 25 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು ಕೈಬಿಡಲು ಕಾರಣವೇನು; (ಪೂರ್ವಾನ್ವಯದ ಬಗ್ಗೆ ಮಾಹಿತಿ ನೀಡುವುದು) | ಅತಿಥಿ ಉಪನ್ಯಾಸಕರನ್ನು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ಆ ಶೈಕ್ಷಣಿಕ ವರ್ಷದಲ್ಲಿ ಲಭ್ಯವಿರುವ ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಲಾಗುವುದರಿಂದ ಅತಿಥಿ ಉಪನ್ಯಾಸಕರ ಆಯ್ಕೆಗೆ ಅರ್ಜಿ ಆಹ್ವಾನಿಸುವ ಸಂದರ್ಭದಲ್ಲಿ ಜಾರಿಯಲ್ಲಿರುವ ನಿಯಮಗಳನ್ವಯ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಅದರಂತೆ, 2025-26ನೇ ಶೈಕ್ಷಣಿಕ ಸಾಲಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರ ಆಯ್ಕೆಗೆ ಆನ್ ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, 2018ರ ಯು.ಜಿ.ಸಿ. ನಿಯಮಾವಳಿಗಳು ಜಾರಿಯಲ್ಲಿರುತ್ತವೆ.<br><br>ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:23600/2023ಕ್ಕೆ ದಿನಾಂಕ:05.09.2024ರಂದು ನೀಡಿರುವ ತೀರ್ಪಿನ ಕ್ರ.ಸಂ (2)ರಲ್ಲಿ "to ensure complete compliance of the minimum qualification as prescribed by the UGC/respondent No.3 under the UGC Regulations, 2018 before selecting any candidates for the post of Guest Lecturer." ಎಂಬುದಾಗಿಯೂ ಹಾಗೂ ಕ್ರ.ಸಂ. (4)ರಲ್ಲಿ "It is also made clear that the respondent Nos. 1 and 2 shall not select any candidate who does not possess minimum qualification as prescribed in the UGC Regulations, 2018." ಎಂಬುದಾಗಿ ನೀಡಲಾಗಿರುವ ನಿರ್ದೇಶನದಂತೆ ಕ್ರಮ'ವಹಿಸಲಾಗಿದೆ. |
| (ಈ) | ನೆರೆಯ ರಾಜ್ಯಗಳಾದ ತೆಲಂಗಾಣ, ಹರಿಯಾಣ, ಪಶ್ಚಿಮ ಬಂಗಾಳ ಹಾಗೂ ಇತರೆ 15ಕ್ಕೂ ಹೆಚ್ಚಿನ ರಾಜ್ಯಗಳು 10, 15, 20 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರಿಗೆ 'One Time Settlement ನಂತೆ 60 ವರ್ಷಗಳವರೆಗೆ ಸೇವಾ ಭದ್ರತೆಯನ್ನು ನೀಡಿವೆ; ಅದರಂತೆ ರಾಜ್ಯದಲ್ಲಿರುವ ಅತಿಥಿ ಉಪನ್ಯಾಸಕರಿಗೂ ಸರ್ಕಾರ ಸೇವಾ ಭದ್ರತೆಯನ್ನು ಜಾರಿಗೊಳಿಸಬಹುದಲ್ಲವೇ; ಈ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅತಿಥಿ ಉಪನ್ಯಾಸಕರನ್ನು ಯಾವುದೇ ಖಾಲಿ ಹುದ್ದೆಗಳ ಎದುರಾಗಿ ನೇಮಕಾತಿ ಮಾಡಲಾಗುವುದಿಲ್ಲ. ಬದಲಾಗಿ, ಕಾಲೇಜುಗಳಲ್ಲಿ ಲಭ್ಯವಾಗುವ ಕಾರ್ಯಭಾರವನ್ನು ಮೊದಲು ಖಾಯಂ ಉಪನ್ಯಾಸಕರಿಗೆ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಕಾರ್ಯಭಾರಕ್ಕೆ ಮಾತ್ರ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಲಾಗುತ್ತದೆ. ಈ ರೀತಿ ತಾತ್ಕಾಲಿಕ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉನ್ಯಾಸಕರಿಗೆ ಸೇವಾ ಭದ್ರತೆ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |
| (ಉ) | ಪ್ರಸ್ತುತ ಉದ್ಯೋಗ ಕಳೆದುಕೊಂಡ Non UGC ಅತಿಥಿ ಉಪನ್ಯಾಸಕರನ್ನು ಪುನಃ ಸೇವೆಗೆ ತೆಗೆದುಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? (ವಿವರವಾದ ಮಾಹಿತಿ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ:1578/2024ಕ್ಕೆ ದಿನಾಂಕ:20.02.2026 ರಂದು ನೀಡಿರುವ ನಿರ್ದೇಶನದಂತೆ, ಕೆಲವು ವಿಷಯಗಳಲ್ಲಿ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಲಭ್ಯವಾಗದ ಪ್ರಯುಕ್ತ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಮಾನ್ಯ ನ್ಯಾಯಾಲಯದ ಗಮನಕ್ಕೆ ತರಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:20.02.2025 ರಂದು ನೀಡಿರುವ ನಿರ್ದೇಶನದಲ್ಲಿ ಕೆಲವು ವಿಷಯಗಳಲ್ಲಿ ಯು.ಜಿ.ಸಿ. ನಿಗದಿತ ವಿದ್ಯಾರ್ಹತೆ ಹೊಂದಿರದ ಅಭ್ಯರ್ಥಿಗಳನ್ನು 2025-26ನೇ ಸಾಲಿನ ಪ್ರಸ್ತುತ ಚಾಲ್ತಿಯಲ್ಲಿರುವ ಸೆಮಿಸ್ಟರ್ ಪೂರ್ಣಗೊಳ್ಳುವವರೆಗೆ ಮಾತ್ರ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿದೆ. |

**ಸಂಖ್ಯೆ:ಇಡಿ 90 ಡಿಸಿಇ 2026(ಇ)**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

## Guest Faculty Working as on 03.03.2026

| Sl. No. | Subjects | No. of GF Working |
|---|---|---|
| 1 | Arabic (Language and Optional) | 1 |
| 2 | Biochemistry | 5 |
| 3 | Biotechnology | 28 |
| 4 | Botany | 112 |
| 5 | Business Management | 431 |
| 6 | Chemistry | 331 |
| 7 | Commerce | 1482 |
| 8 | Computer Science | 1016 |
| 9 | Criminology | 21 |
| 10 | Economics | 478 |
| 11 | Education | 15 |
| 12 | Electronics | 5 |
| 13 | English (Language and Optional) | 625 |
| 14 | Environment Science | 24 |
| 15 | Environmental Studies | 81 |
| 16 | Fashion Technology | 3 |
| 17 | Forensic science | 1 |
| 18 | Genetics | 1 |
| 19 | Geography | 131 |
| 20 | Geology | 3 |
| 21 | Hindi (Language and Optional) | 175 |
| 22 | History | 680 |
| 23 | HOME SCIENCE | 17 |
| 24 | Industrial Chemistry | 1 |
| 25 | Journalism | 50 |
| 26 | Kannada (Language and Optional) | 1019 |
| 27 | Law | 3 |
| 28 | Library science | 156 |
| 29 | Marathi (Language and Optional) | 3 |
| 30 | Mathematics | 393 |
| 31 | Microbiology | 27 |
| 32 | Music | 3 |
| 33 | Philosophy | 1 |
| 34 | Physical Education | 195 |
| 35 | Physics | 311 |
| 36 | Political Science | 744 |
| 37 | Psychology | 29 |
| 38 | Public Administration | 2 |
| 39 | Sanskrit (Language and Optional) | 9 |
| 40 | Social Work | 80 |
| 41 | Sociology | 376 |
| 42 | Statistics | 1 |
| 43 | Tamil (Language and Optional) | 2 |
| 44 | Telugu (Language and Optional) | 5 |
| 45 | Urdu (Language and Optional) | 77 |
| 46 | Women studies | 3 |
| 47 | Zoology | 115 |
| | **Grand Total** | **9271** |

ಅನುಬಂಧ-2

| Sl No | District | GF Count |
|---|---|---|
| 1 | Bagalkote | 305 |
| 2 | Ballari | 238 |
| 3 | Belagavi | 431 |
| 4 | Bengaluru rural | 91 |
| 5 | Bengaluru urban | 667 |
| 6 | Bidar | 243 |
| 7 | Chamarajanagara | 124 |
| 8 | Chikkaballapura | 162 |
| 9 | Chikkamagaluru | 233 |
| 10 | Chitradurga | 250 |
| 11 | Dakshina kannada | 227 |
| 12 | Davangere | 219 |
| 13 | Dharwad | 217 |
| 14 | Gadag | 132 |
| 15 | Hassan | 362 |
| 16 | Haveri | 259 |
| 17 | Kalaburagi | 503 |
| 18 | Kodagu | 56 |
| 19 | Kolar | 199 |
| 20 | Koppal | 350 |
| 21 | Mandya | 315 |
| 22 | Mysuru | 557 |
| 23 | Raichur | 294 |
| 24 | Ramanagara | 138 |
| 25 | Shivamogga | 328 |
| 26 | Tumakuru | 327 |
| 27 | Udupi | 170 |
| 28 | Uttara kannada | 251 |
| 29 | VIJAYANAGAR | 191 |
| 30 | Vijayapura | 213 |
| 31 | Yadgir | 244 |
| **Grand Total** | | **8296** |